2) ಆಹಾರ ಸಾಮಾಗ್ರಿಗಳ ವಿತರಣೆಯನ್ನು ನ್ಯಾಯಬೆಲೆ ಅಂಗಡಿಗಳವರಿಂದ ಹಿಂದಕ್ಕೆ ಪಡೆದು ಸಹಕಾರ ಸಂಘಗಳ ಮೂಲಕ ವಿತರಣೆ ಮಾಡಿಸಲು ಸರ್ಕಾರ ಉದ್ದೇಶಿಸಿದೆಯೇ?

3) ಹಾಗಿದ್ದಲ್ಲಿ ಅದನ್ನು ಕಟ್ಟುನಿಟ್ಟಾಗಿ ಯಾವಾಗ ಜಾರಿಗೆ ತರಲಾಗುವುದು?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

1) ಬಂದಿರುತ್ತದೆ.

2) ಸದ್ಯಕ್ಕೆ ಇರುವುದಿಲ್ಲ

3) ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರಿ ಆದೇಶ ಸಂಖ್ಯೆ ಎಫ್.ಟಿಡಿ 57 : ಡಿಆರ್‌ವಿ. : 90 ದಿ. 8-11-90ರ ಪ್ರಕಾರ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಿರುವುದರಿಂದ ಆಹಾರ ಪೂರೈಕೆ ವಿಚಾರದಲ್ಲಿ ಜಿಲ್ಲಾಧಿಕಾರಿಗಳೇ ಅಧಿಕಾರ ಹೊಂದಿರುವುದರಿಂದ ಕಟ್ಟುನಿಟ್ಟಾಗಿ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಪಡಿತರ ವಿತರಣೆಯು ಸರಿಯಾಗಿ ಮಾಡಿಸುವ ವಿಚಾರದಲ್ಲಿ ಆದೇಶಗಳನ್ನು ನೀಡಲಾಗಿದೆ. ಮತ್ತು ನ್ಯಾಯಬೆಲೆ ಅಂಗಡಿಗಳು ಸರಿಯಾಗಿ ಪಡಿತರ ಪದಾರ್ಥಗಳನ್ನು ಎತ್ತುವಳಿ ಮಾಡದಿದ್ದಲ್ಲಿ ಮತ್ತು ಹಂಚಿಕೆ ಮಾಡುವಲ್ಲಿ ವಿಫಲವಾದಲ್ಲಿ ಅಂಥಹವರ ಮೇಲೆ ಸೂಕ್ತ ಕ್ರಮ ಕೈಗೊಂಡು ಅವರುಗಳ ಅಂಗಡಿ ರದ್ಧತಿ ಮಾಡಲು ನೀಡಿದ ಆದೇಶದಂತೆ ಕ್ರಮ ಕೈಗೊಳ್ಳಲು ತಿಳಿಸಿದೆ.

ಕರ್ನಾಟಕ ರಾಜ್ಯದಲ್ಲಿರುವ ಸಹಕಾರ ಸಂಘಗಳು

676 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಸಹಕಾರ ಸಂಘಗಳೆಷ್ಟು?

ಆ) ಕಾರ್ಯನಿರ್ವಹಿಸುತ್ತಿರುವುಗಳ ಪೈಕಿ ಲಾಭಗಳಿಸುತ್ತಿರುವ ಸಹಕಾರ ಸಂಘಗಳೆಷ್ಟು?

ಇ) ಹೆಚ್ಚು ನಷ್ಟವನ್ನು ಹೊಂದಿರುವ ಸಹಕಾರ ಸಂಘಗಳ ಪುರ್ನನಿರ್ಮಾಣಕ್ಕಾಗಿ ಸರ್ಕಾರ ಯಾವ ರೀತಿಯ ಕ್ರಮಗಳನ್ನು ಅನುಸರಿಸುತ್ತಿದೆ?

ಶ್ರೀ ಕೆ.ಪಿಚ್. ಪಾಟೀಲ್ (ಸಹಕಾರ ಸಚಿವರು) :

	1988-89	1989-90	1990-91
ಅ)	25187	25709	26629
ಆ)	11507	11514	11523

ಇ) ಹೆಚ್ಚು ನಷ್ಟವನ್ನು ಹೊಂದಿರುವ ಸಹಕಾರ ಸಂಘಗಳಿಗೆ ಷೇರು ಧನ, ದುಡಿಯುವ ಬಂಡವಾಳ ಕೊಡುವ ಮೂಲಕ ಪುನಶ್ಚೇತನ ಕ್ರಮವನ್ನು ಸರ್ಕಾರ ಕೈಗೊಂಡಿದೆ. ಇದರ ಜೊತೆಗೆ ಆಡಳಿತ ದಕ್ಷತೆ ಹೆಚ್ಚಿಸಲು ಸಹ ಕ್ರಮ ಕೈಗೊಳ್ಳಲಾಗಿದೆ.

ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ತಿದ್ದುಪಡಿ

419 - ಶ್ರೀ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸರ್ಕಾರವು ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳಿಗೆ ತಿದ್ದುಪಡಿ ತರಲು ಉದ್ದೇಶಿಸಿದೆಯೇ?

2) ಹಾಗಿದ್ದಲ್ಲಿ ಅಧಿಕಾರೇತರಿಗೆ ಸಿಟ್ಟಿಂಗ್ ಫೀ ಮತ್ತು ಇತರೆ ಭತ್ಯೆಗಳನ್ನು ಹೆಚ್ಚಿಸುವ ಅವಕಾಶವನ್ನು ಸೇರಿಸಲಾಗುತ್ತದೆಯೇ?

3) ಸಿಟ್ಟಿಂಗ್ ಫೀ ಮತ್ತು ಪ್ರವಾಸ ಭತ್ಯೆಗಳನ್ನು ಹೆಚ್ಚಿಸುವ ಪ್ರಸ್ತಾವವು ಸರ್ಕಾರದ ಮುಂದಿದೆಯೇ?

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು) :

1) ಹೌದು

2) ಈಗಾಗಲೇ ನಿಯಮಗಳಲ್ಲಿ ಅವಕಾಶ ಇದೆ.

3) ಸರ್ಕಾರದ ಪರಿಶೀಲನೆಯಲ್ಲಿದೆ

ತುಮಕೂರಿನಲ್ಲಿ ಕೃಷಿ ಉತ್ಪನ್ನ ಮಾರಾಟ ಸಮಿತಿ ಬಗ್ಗೆ

412 - ಶ್ರೀ ಎಸ್. ಶಫೀ ಅಹಮದ್. (ತುಮಕೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಉತ್ಪನ್ನ ಮಾರಾಟ ಸಮಿತಿ, ತುಮಕೂರಿನ ಕಳೆದ ಮೂರು ವರ್ಷಗಳಲ್ಲಿ ವಸೂಲಿ ಮಾಡಿದ ಆದಾಯವೇನು?
(ಪ್ರತ್ಯೇಕವಾಗಿ ಮಾಹಿತಿಯನ್ನು ನೀಡಿರುವುದು)

ಶ್ರೀ ಕೆ.ಹೆಚ್ ಪಾಟೀಲ್ (ಸಹಕಾರ ಸಚಿವರು):

(ಪ್ರತಿ ವರ್ಷದ ಆದಾಯ - ಜುಲೈ 1 ರಿಂದ ಜೂನ್ 30 ರವರೆಗೆ)

ವರ್ಷ	ಆದಾಯ (ರೂ. ಲಕ್ಷಗಳಲ್ಲಿ)
1987-88	31.71
1988-89	37.55
1989-90	37.19

SHORTAGE OF VETERINARY HOSPITALS IN BELLARY DISTRICT

24 - Sri K.V. Ravindranatha Babu (Kottur).: will the Minister for Rural Development and Panchayat Raj and Animal Husbandry. be pleased to state.

a) *Whether a required number of Veterinary Hospitals are there in Bellary District.*

b) *If not, the number, of Veterinary Hospitals, still required?*

Sri. B.BASAVALINGAPPA (Hon'ble Minister for Rural Development & Panchayat Raj and animal Husbandry.

a) No.

b) 65.

Converting Banneraghatta National Park into a Zoo

178 - Sri perikal M.Mallappa (chickpet) : will the minister of Forests be pleased to state.

a) *The total area of National park, Banneraghtta Bangalore.*